ಬೆಂಗಳೂರು ನಗರದಲ್ಲಿ ಸಂಚಾರದ ಒತ್ತಡ ತಡೆಗಟ್ಟುವ ಬಗ್ಗೆ

೭೮೯(೧೪೦೫) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ; —

ಅ) ಬೆಂಗಳೂರು ನಗರದಲ್ಲಿ ಸಂಚಾರದ ಒತ್ತಡ ತಡೆಗಟ್ಟಲು ನೆಲ ಅಂತಸ್ತು ರಸ್ತೆ ಮತ್ತು ಮೇಲು ರಸ್ತೆ ನಿರ್ಮಾಣ ಮಾಡಲು ಸರ್ಕಾರ ತೀರ್ಮಾನ ಮಾಡಿತ್ತೇ ?

ಆ) ಹಾಗಿದ್ದಲ್ಲಿ ಅದು ಯಾವ ಇಸವಿಯಲ್ಲಿ ತಿರ್ಮಾನ ವಾಗಿತ್ತು ?

ಇ) ಹಾಗಿದ್ದಲ್ಲಿ ಈ ಯೋಜನೆಯು ಜಾರಿಗೆ ಬಾರದಿರುವುದರಿಂದ ಬೆಂಗಳೂರಿನ ಜನತೆ ಗಾಗಿರುವ ತೊಂದರೆಯನ್ನು ನಿವಾರಿಸಲು ಸರ್ಕಾರವು ಸೂಕ್ತ ಕ್ರಮವನ್ನು ಕೈಗೊಳ್ಳುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಈಬಗ್ಗೆ ಸರ್ಕಾರದ ಮಟ ದಲ್ಲಿ ಯಾವುದೇ ತೀರ್ಮಾನ ತೆಗೆದು ಕೊಂಡಿಲ್ಲ. ಆದಾಗ್ಯೂ ಸಂಚಾರದ ಒತ್ತಡವನ್ನು ಕಡಿಮೆ ಮಾಡುವ ಸಲುವಾಗಿ ಕೆಲವು ಮೇಲುದಾರಿಗಳನ್ನು ಮತ್ತು ಸುರಂಗ ಮಾರ್ಗಗಳನ್ನು ನಿರ್ಮಿಸಲು ಬೆಂಗಳೂರು ಮಹಾನಗರ ಪಾಲಿಕೆಯು ಯೋಚಿಸಿದೆ.

ಆ) ಉದ್ಭವಿಸುವುದಿಲ್ಲ.

ಇ) ಫ್ಲೈ ಓವರ್‌ಗಳನ್ನು ಮತ್ತು ಸುರಂಗ ಮಾರ್ಗಗಳನ್ನು ನಿರ್ಮಿಸಲು ಹಣಕಾಸಿನ ಸಂಸ್ಥೆ ಗಳಿಂದ ಅಥವಾ ವಿಶ್ವ ಬ್ಯಾಂಕ್‌ನಿಂದ ಆರ್ಥಿಕ ನೆರವು ಪಡೆಯಲು ಉದ್ದೇಶಿಸಲಾಗಿದೆ.

ಬೆಂಗಳೂರು ನಗರದ ಮುಖ್ಯ ರಸ್ತೆಗಳಿಗೆ ಸೋಡಿಯಂ ಲೈಟ್ಸ್

೭೯೦(೧೪೦೬) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ೧೯೮೮-೮೯ ರಲ್ಲಿ ಬೆಂಗಳೂರು ಮಹಾನಗರ ಮುಖ್ಯ ರಸ್ತೆಗಳಲ್ಲಿ ಹಾಕಿರುವ ಸೋಡಿಯಂ ದೀಪಗಳ ಸಂಖ್ಯೆ ಎಷ್ಟು ? ಹಾಗೂ ಸಂಖ್ಯಾವಾರು ವಿವರ ಒದಗಿಸುವುದು?

ಆ) ೧೯೯೦ನೇ ಇಸವಿಯಲ್ಲಿ ಎಷ್ಟೆಷ್ಟು ದೀಪಗಳನ್ನು ಹಾಕಬೇಕೆಂಬ ಯೋಜನೆಯನ್ನು ರೂಪಿಸಿ ಕೊಂಡಿದ್ದೀರಿ ವಿವರ ನೀಡುವುದು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ೧೨೭೨.

ಆ) ೫೦೦ ಇವುಗಳನ್ನು ಮುಖ್ಯವಾಗಿ ನಗರದ ಮುಖ್ಯ ರಸ್ತೆಗಳಿಗೆ ಹಾಗೂ ಮುಖ್ಯ ರಸ್ತೆ ಗಳನ್ನು ಕೂಡುವ ರಸ್ತೆಗಳಿಗೆ ಮತ್ತು ವೃತ್ತಗಳಿಗೆ ಅಳವಡಿಸಲು ಯೋಜನೆ ರೂಪಿಸಲಾಗಿದೆ.

ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಲ್ಯಾಂಡ್ ರಿಕಾರ್ಡ್ಸ್ ರವರಿಗೆ ಜೀಪು ನೀಡುವ ಬಗ್ಗೆ

೭೯೪ (೧೬೫೫) ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ಅಸಿಸ್ಟೆಂಟ್ ಡೈರೆಕ್ಟರ್ ಆಫ್ ರೆಕಾರ್ಡ್‌ರವರಿಗೆ ಜೀಪು ನೀಡಲು ಉದ್ದೇಶಿಸಿದೆಯೇ ?

ಆ) ಇವರಿಗೆ ಜೀಪು ನೀಡಿದರೆ ರೈತರಿಗೆ ಸಹಾಯವಾಗುವ ಉದ್ದೇಶ ಸರ್ಕಾರದ ಗಮನಕ್ಕೆ ಬಂದಿಲ್ಲವೆ ?